ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

9

ಇಲಾಖೆ / ವಿಷಯ : DEPARTMENT / SUBJECT: ಮಳೆ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 22/10/20

# ಮೊನ್ನೆಯದು 23 ವರ್ಷದ 3ನೇ ಮಹಾಮಳೆ

## ದಾಖಲೆ ಮಳೆ | 1997ರ ನಂತರ ಅಕ್ಟೋಬರಲ್ಲಿ ಇಷ್ಟೊಂದು ಮಳೆ ಆಗಿದ್ದು 3ನೇ ಸಲ

• **ಕನ್ನಡಪ್ರಭ ವಾರ್ತೆ** ಬೆಂಗಳೂರು 22/10

ಬೆಂಗಳೂರಿನಲ್ಲಿ ಮಂಗಳವಾರ ತಡರಾತ್ರಿ ವರೆಗೆ ಎಡೆಬಿಡದೇ ಸುರಿದು ಅವಾಂತರ ಸೃಷ್ಟಿಸಿದ ಮಳೆ ಸಾಮಾನ್ಯ ಮಳೆಯಲ್ಲ, ಇದು ಕಳೆದ 23 ವರ್ಷದ ಇತಿಹಾಸದಲ್ಲಿ ಅಕ್ಟೋಬರ್‌ನಲ್ಲಿ ಸುರಿದ ಮೂರನೇ ಮಹಾಮಳೆಯಾಗಿದೆ ಎಂದು ಕೆಎಸ್ ಎನ್‌ಡಿಎಂಸಿ ದೃಢಪಡಿಸಿದೆ.

ಭಾರಿ ಪ್ರಮಾಣದಲ್ಲಿ ಅನಾಹುತ ಸೃಷ್ಟಿಸಿರುವ ಈ ಮಳೆಯು 1997ರ ನಂತರ ಕಳೆದ 23 ವರ್ಷದಲ್ಲಿ ಅಕ್ಟೋಬರ್ ತಿಂಗಳಿನಲ್ಲಿ 24 ಗಂಟೆಯಲ್ಲಿ ಸುರಿದ ಮೂರನೇ ಅತಿ ಹೆಚ್ಚಿನ ಪ್ರಮಾಣದ್ದಾಗಿದೆ. ಮಂಗಳವಾರ ನಗರದ ಕೆಂಗೇರಿಯಲ್ಲಿ ಅತಿ ಹೆಚ್ಚು 124.5 ಮಿ.ಮೀ ಮಳೆಯಾದ ವರದಿಯಾಗಿದೆ. ಇನ್ನು 1997ರ ಅ.1ರಂದು 178.9 ಮಿ.ಮೀ ದಾಖಲೆಯ ಮಳೆಯಾಗಿದೆ. ಇದು ಅಕ್ಟೋಬರ್ ತಿಂಗಳಿನ ಸಾರ್ವಕಾಲಿಕ ದಾಖಲೆಯ ಮಳೆಯಾಗಿದೆ. 2019ರ ಅ.9 ರಂದು 140.5 ಮಿ.ಮೀ ಮಳೆ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ದಾಖಲಾಗಿದೆ. ಇದು 2ನೇ ದಾಖಲೆಯ ಮಳೆ. ಇದೀಗ ಮಂಗಳವಾರದ ಮಳೆ ಅಕ್ಟೋಬರ್‌ನ 3ನೇ ಅತಿ ಹೆಚ್ಚಿನ ಮಳೆಯಾಗಿ ದಾಖಲಾಗಿದೆ ಎಂದು ಕೆಎಸ್‌ಎನ್‌ಡಿಎಂಸಿ ಅಧಿಕಾರಿಗಳು 'ಕನ್ನಡಪ್ರಭ'ಕ್ಕೆ ಮಾಹಿತಿ ನೀಡಿದ್ದಾರೆ.



1997ರ ಅ.1ರಂದು **178.9** ಮಿ.ಮೀ

2019ರ ಅ.9ರಂದು **140.5** ಮಿ.ಮೀ

2020ರ ಅ.20ರಂದು **124.5** ಮಿ.ಮೀ.

**ವಾಡಿಕೆಗಿಂತ ಹೆಚ್ಚು ಮಳೆ:** ವಾಡಿಕೆ ಅಂದಾಜಿನ ಪ್ರಕಾರ ನಗರದಲ್ಲಿ ಅ.20ರ ಮಂಗಳವಾರ ಸರಾಸರಿ 5 ಮಿ.ಮೀ ಮಳೆಯಾಗಬೇಕು. ಆದರೆ, ಮಂಗಳವಾರ 24 ಗಂಟೆಯಲ್ಲಿ ಸರಾಸರಿ 57 ಮಿ.ಮೀ ಮಳೆಯಾಗಿದೆ.

**ಮಂಗಳವಾರ ತಡರಾತ್ರಿಯ ಮಳೆ ನಗರದಲ್ಲಿ ಅಕ್ಟೋಬರ್ ಪಾಲಿಗೆ ಮೂರನೇ ಸಾರ್ವಕಾಲಿಕ ದಾಖಲೆಯ ಮಳೆಯಾಗಿದೆ. ಅಕ್ಟೋಬರ್ ಬೆಂಗಳೂರಿಗೆ ಅತಿ ಹೆಚ್ಚು ಮಳೆಯಾಗುವ ತಿಂಗಳಾಗಿದೆ.**
• **ಶ್ರೀನಿವಾಸ್ ರೆಡ್ಡಿ** ಹಿರಿಯ ಹವಾಮಾನ ತಜ್ಞ

### ಕೆಂಗೇರಿಯಲ್ಲಿ ಅತಿ ಹೆಚ್ಚು ಮಳೆ

ಕೆಂಗೇರಿಯಲ್ಲಿ ಅತಿ ಹೆಚ್ಚು 124.5 ಮಿ.ಮೀ ಮಳೆಯಾದರೆ, ಆರ್‌ಆರ್ ನಗರದಲ್ಲಿ 123.5 (ಮೊದಲನೇ ಮಳೆ ಮಾಪನ ಕೇಂದ್ರ), ಲಕ್ಕಸಂದ್ರದಲ್ಲಿ 115, ವಿಶ್ವೇಶ್ವರಪುರದಲ್ಲಿ 108.5, ಆರ್.ಆರ್. ನಗರದಲ್ಲಿ 102 (2ನೇ ಮಳೆ ಕೇಂದ್ರ), ಗೊಟ್ಟಿಗೆರೆಯಲ್ಲಿ 101 ಮಿ.ಮೀ ಮಳೆಯಾಗಿದೆ.